ವಿಜಯ ಕರ್ನಾಟಕ

Online Newspaper Clipping Service
Dtd- Thursday, 14th, February- 2019



# ಬೃಹತ್ ಆರೋಗ್ಯ ಮೇಳ: ಫೆ.16ಕ್ಕೆ

**ಕೋಲಾರ:** ಫೆ.16 ರಂದು ಕೋಲಾರ ಲೋಕಸಭೆ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ ಬೃಹತ್ ಆರೋಗ್ಯ ಮೇಳವನ್ನು ಸರಕಾರಿ ಮಹಿಳಾ ಕಾಲೇಜು ಆವರಣದಲ್ಲಿ ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕಿದೆ ಎಂದು ಡಿಎಚ್‌ಒ ಡಾ.ಎಸ್.ಎನ್. ವಿಜಯ್‌ಕುಮಾರ್ ಕೋರಿದರು.

ನಗರದ ತಮ್ಮ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ಕೇಂದ್ರ ಸರಕಾರದ ಆದೇಶದ ಮೇರೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಜಿಲ್ಲೆಯ ನಾನಾ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಮೇಳ ನಡೆಸಲಾಗುತ್ತಿದೆ.

ಬೆಳಗ್ಗೆ 9ಕ್ಕೆ ನೋಂದಣಿ ಕಾರ್ಯ ಆರಂಭವಾಗಲಿದ್ದು, ಸಂಜೆ 6 ರವರೆಗೆ ಆರೋಗ್ಯ ತಪಾಸಣೆ ನಡೆಯುತ್ತದೆ. ಜನಕ್ಕೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಕಲ್ಪಿಸಬೇಕು ಎಂಬುದೇ ಶಿಬಿರದ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ 1614 ನಾನಾ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ತಪಾಸಣೆ ನಡೆಸಲಾಗುವುದು ಎಂದರು. ಆರೋಗ್ಯ ಸಚಿವ ಶಿವಾನಂದ ಎಸ್. ಪಾಟೀಲ್ ಆರೋಗ್ಯ ಮೇಳ ಉದ್ಘಾಟಿಸಲಿದ್ದು, ಶಾಸಕ ಕೆ.ಶ್ರೀವಾಸಗೌಡ ಅಧ್ಯಕ್ಷತೆವಹಿಸುತ್ತಾರೆ. ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್‌ಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಂಸದ ಕೆಚ್. ಮುನಿಯಪ್ಪ ಸೇರಿದಂತೆ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಭಾಗವಹಿಸುತ್ತಾರೆ ಎಂದು ಹೇಳಿದರು.

ವೈದ್ಯಕೀಯ, ಸ್ತ್ರೀ ರೋಗ, ಶಸ್ತ್ರ ಚಿಕಿತ್ಸಾ, ಕೀಲು ಮತ್ತು ಮೂಳೆ, ತಾಯಿ ಮತ್ತು ಮಕ್ಕಳ, ಕಿವಿ ಮತ್ತು ಗಂಟಲು, ಕಣ್ಣು, ಚರ್ಮ, ಹಾಗೂ ದಂತ ಸಂಭಂಧಿ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ತಜ್ಞರು ಲಭ್ಯವಿರುತ್ತಾರೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಆರೋಗ್ಯ ಕರ್ನಾಟಕ ಯೋಜನೆಯಡಿ ಕೊಡಿಸಲು ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಆರ್.ಎಲ್.ಜಾಲಪ್ಪ ಆಸ್ಪತ್ರೆ, ಇಸ್ಟ್ ಪಾಯಿಂಟ್, ವೈದೇಹಿ ಸಂಸ್ಥೆಯ ವೈದ್ಯರು, ತಜ್ಞರು ಮೇಳದಲ್ಲಿ ಪಾಲ್ಗೊಂಡು ತಪಾಸಣೆ ಮಾಡುತ್ತಾರೆ.ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ಎಸ್.ಜಿ. ನಾರಾಯಣ ಸ್ವಾಮಿ ಮಾತನಾಡಿ, ಮೊದಲ ಹಂತದಲ್ಲಿ ವೈದ್ಯರು ಪರೀಕ್ಷಿಸಿ ಅಸಾಂಕ್ರಾಮಿಕ ರೋಗಿಗಳನ್ನು ಮಾತ್ರ ಮೇಳದಲ್ಲಿ ಚಿಕಿತ್ಸೆ ಪಡೆಯಲು ಗುರುತಿಸುತ್ತಾರೆ ಎಂದು ತಿಳಿಸಿದರು.ಮೇಳದ ಬಗ್ಗೆ ಈಗಾಗಲೇ ಪ್ರಚಾರ ನಡೆಸಿದ್ದು 4,000ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಯಿದೆ. ರೋಗಿಗಳು ಶಿಬಿರಕ್ಕೆ ಬರಲು ಹೋಬಳಿ ಕೇಂದ್ರದಿಂದ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆರ್‌ಸಿಎಚ್‌ಒ ಡಾ.ಚಂದನ್, ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಜಗದೀಶ್, ಕುಟುಂಬ ಕಲ್ಯಾಣಾಧಿಕಾರಿ ಡಾ.ಭಾರತಿ, ವೈದ್ಯಾಧಿಕಾರಿ ಡಾ.ನಾರಾಯಣಸ್ವಾಮಿ ಉಪಸ್ಥಿತರಿದ್ದರು.

# ಕೋಲಾರ: ಆರೋಗ್ಯ ಪರೀಕ್ಷಾ ಶಿಬಿರಕ್ಕೆ ತಯಾರಿ

ಕೋಲಾರ ಫೆ ೧೩

ವಿಶೇಷ ತಜ್ಞ ವೈದ್ಯರು ವಿವಿಧ ರೋಗಗಳ ಪರೀಕ್ಷೆ ನಡೆಸಿ. ಸಲಹೆ-ಸೂಚನೆ-ಔಷಧ ನೀಡುವ ಉಚಿತ ಅರೋಗ್ಯ ತಪಸಣೆ ಶಿಬಿರವನ್ನು ಇದೇ ೧೬ರಂದು ನಗರದ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆಯೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ॥ ಎಸ್. ಎನ್. ವಿಜಯಕುಮಾರ್ ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ॥ ಎಸ್.ಜಿ. ನಾರಾಯಣಸ್ವಾಮಿ ಅವರು ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿಗಳ ಸಭಾಂಗಣದಲ್ಲಿ ಪತ್ರಕರ್ತರೊಡನೆ ಮಾತನಾಡಿದ ವೈದ್ಯರು, ಅಂದು ಬೆಳಿಗ್ಗೆ ೧೦ರಿಂದ ತಪಾಸಣೆ ಆರಂಭವಾಗಲಿದೆಯೆಂದೂ ಶಿಬಿರದಲ್ಲಿ ಉಚಿತವಾಗಿ ಇಸಿಜಿ, ಎಕೋ ರಕ್ತದೊತ್ತಡ . ಮಧುಮೇಹ (ಸಕ್ಕರೆ ಕಾಯಿಲೆ) ಪರೀಕ್ಷೆ ಮಾಡಲಾಗುವುದು ಎಂದರು.

ಜಿಲ್ಲೆಯಲ್ಲಿರುವ ಎಲ್ಲ ತಜ್ಞ ವೈದ್ಯರ ಜೊತೆಗೆ ವೈದೇಹಿ ಆಸ್ಪತ್ರೆ, ಈಸ್ಟ್ ಪಾಯಿಂಟ್ ಕಾಲೇಜು ಹಾಗೂ ಜಾಲಪ್ಪ ಆಸ್ಪತ್ರೆಯ ವಿಶೇಷ ತಜ್ಞವೈದ್ಯರು ಭಾಗವಹಿಸಲಿದ್ದಾರೆ. ಆಯುರ್ವೇದ, ಯುನಾನಿ, ಹೋಮಿಯೋಪತಿ ಪದ್ಧತಿಯ ಚಿಕಿತ್ಸೆ ಸಹ ಲಭ್ಯವಿರುತ್ತದೆಂದೂ ನುಡಿದರು.

ವೈದ್ಯಕೀಯ, ಸ್ತ್ರೀರೋಗ, ಶಸ್ತ್ರಚಿಕಿತ್ಸೆ, ಕಿವಿ ಮತ್ತು ಗಂಟಲು, ನೇತ್ರ, ಚರ್ಮ, ದಂತ, ತಾಯಿ ಮತ್ತು ಮಕ್ಕಳ ತಜ್ಞರು ಪಾಲ್ಗೊಂಡು, ರೋಗಿಗಳಿಗೆ ಅರಿವು ಮೂಡಿಸುವುದು ಶಿಬಿರದ ಉದ್ದೇಶಗಳಲ್ಲಿ ಒಂದು ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ನಾರಾಯಣಸ್ವಾಮಿ ತಿಳಿಸಿದರು.

ಗೋಷ್ಠಿಯಲ್ಲಿ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ॥ ಚಂದನ್‌ಕುಮಾರ್, ಡಾ॥ ಭಾರತಿ, ಡಾ॥ ಜಗದೀಶ್ ಮೊದಲಾದವರು ಇದ್ದರು.

ಅಯುಷ್ಮಾನ್ ಭಾರತ್, ಆರೋಗ್ಯ ಕರ್ನಾಟಕ ಅಡಿಯಲ್ಲಿ ದ್ವಿತೀಯ ಹಂತದ ಡಾ॥ ಚಿಕಿತ್ಸಾ ವಿಧಾನಗಳು, ಕ್ಲಿಷ್ಟಕರ ದ್ವಿತೀಯಹಂತದ ೨೫೪ ಚಿಕಿತ್ಸಾ ವಿಧಾನಗಳು, ತೃತೀಯ ಹಂತದ ೯೦೦ ಚಿಕಿತ್ಸಾ ವಿಧಾನ ಹಾಗೂ ೧೬೯ ತುರ್ತು ಸೇರಿ ಒಟ್ಟು ೧೬೧೪ಳ ಚಿಕಿತ್ಸೆಗಳನ್ನು ಒದಗಿಸಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಯವರು ವಿವರಿಸಿದರು.